ಬೆಂಗಳೂರು ತುಮಕೂರು ಹೆದ್ದಾರಿಯಲ್ಲಿ ಅಪಘಾತ

2357 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು-ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ 1995-96 ಮತ್ತು 1996-97ನೇ ಸಾಲಿನಲ್ಲಿ ಒಟ್ಟು ಎಷ್ಟು ಅಪಘಾತಗಳು ಸಂಭವಿಸಿದೇ, ಎಷ್ಟು ಮಂದಿ ಸಾವಿಗೀಡಾಗಿದ್ದಾರೆ?

ಆ) ಈ ಅಪಘಾತ ಸಂಭವಿಸಲು ಕಾರಣವೇನೆಂದು ಸಮೀಕ್ಷೆಯನ್ನು ಏನಾದರೂ ನಡೆಸಲಾಗಿದೆಯೇ? ಇದರ ಪರಿಹಾರಕ್ಕೆ ಸರ್ಕಾರವು ಏನಾದರೂ ಕ್ರಮ ಕೈಗೊಂಡಿರುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರು-ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ 1995-96ನೇ ಸಾಲಿನಲ್ಲಿ 244 ಅಪಘಾತಗಳು ಸಂಭವಿಸಿದ್ದು, ಇದರಲ್ಲಿ 59 ಜನರು ಸಾವಿಗೀಡಾಗಿದ್ದಾರೆ. 1996-97ನೇ ಸಾಲಿನಲ್ಲಿ 239 ಅಪಘಾತಗಳು ಸಂಭವಿಸಿದ್ದು, 57 ಜನರು ಸಾವಿಗೀಡಾಗಿದ್ದಾರೆ.

ಆ) ರಸ್ತೆಯ ವಿನ್ಯಾಸದಲ್ಲಿನ ನ್ಯೂನತೆಯಿಂದ ಅಪಘಾತಗಳು ಸಂಭವಿಸಿರುವುದಿಲ್ಲ. ವಾಹನ ಚಾಲಕರು ಮಿತಿಮೀರಿದ ವೇಗದಲ್ಲಿ ಹಾಗೂ ನಿರ್ಲಕ್ಷತೆಯಿಂದ ವಾಹನ ಚಾಲನೆ ಮಾಡಿರುವುದರಿಂದ ಬಹುತೇಕ ವಾಹನ ಅಪಘಾತಗಳು ಸಂಭವಿಸಿರುತ್ತದೆ. ವಾಹನ ಸಂಚಾರದ ದಟ್ಟಣೆಗೆ ಅನುಗುಣವಾಗಿ ಹಾಲಿಯಿರುವ ದ್ವಿಪಥ ರಸ್ತೆಯನ್ನು ನೆಲಮಂಗಲದಿಂದ - ತುಮಕೂರು ವರೆಗೆ 4 ಪಥ ರಸ್ತೆಯನ್ನಾಗಿ ಪರಿವರ್ತಿಸಲು ಯೋಜಿಸಲಾಗಿದೆ.

ಸಕಲೇಶಪುರ ತಾಲ್ಲೂಕಿನ ಪ್ರವಾಸಿ ಕೇಂದ್ರಗಳು

2358 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಪ್ರವಾಸಿಗಳಿಗಾಗಿ ಗುರುತಿಸಲಾಗಿರುವ ಸ್ಥಳಗಳು ಯಾವುವು?

ಆ) ಪ್ರವಾಸಿಗರಿಗಾಗಿ ಮೇಲ್ಕಂಡ ಸ್ಥಳಗಳಲ್ಲಿ ಏನೇನು ಅನುಕೂಲ ಒದಗಿಸಲಾಗಿದೆ?

ಇ) ಇದಕ್ಕಾಗಿ ತಗಲಿರುವ ವೆಚ್ಚ ಎಷ್ಟು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) 1) ನೂತನ ಪ್ರವಾಸೋದ್ಯಮ ನೀತಿಯಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಮುರಗುಂದವನ್ನು "ಸಿ" ಗುಂಪಿನಲ್ಲಿ ಗುರ್ತಿಸಲಾಗಿದೆ.